ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
೨.	ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ (ತಿದ್ದುಪಡಿ) ವಿಧೇಯಕ ೧೯೯೫	೧೦-೫-೧೯೯೫	ರಾಜ್ಯಪಾಲರು
೩.	ಕರ್ನಾಟಕ ಮಹಿಳಾ ಆಯೋಗ ವಿಧೇಯಕ, ೧೯೯೫	೨೪-೫-೧೯೯೫	”
೪.	ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ ೧೯೯೫	೧೮-೯-೧೯೯೫	”
೫.	ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇಧ) (ಎರಡನೇ ತಿದ್ದುಪಡಿ) ವಿಧೇಯಕ, ೧೯೯೫	೧೮-೯-೧೯೯೫	”
೬.	ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ (ಎರಡನೇ ತಿದ್ದುಪಡಿ) ವಿಧೇಯಕ ೧೯೯೫	೨೫-೯-೧೯೯೫	”
೭.	ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ವಿಧೇಯಕ, ೧೯೯೫	೨೬೯೧೯೯೫	”
೮.	ಕರ್ನಾಟಕ ಧನ ವಿನಿಯೋಗ (ನಂ. ೨)	೨೬-೯-೧೯೯೫	”
೯.	ಕರ್ನಾಟಕ ಧನ ವಿನಿಯೋಗ (ನಂ. ೩) ವಿಧೇಯಕ	೨೬-೯-೧೯೯೫	”
೧೦.	ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ, ೧೯೯೫	೦೫-೧೦-೧೯೯೫	”
೧೧.	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, ೧೯೯೫	೦೫-೧೦-೧೯೯೫	”
೧೨.	ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ, ೧೯೯೫	೧೨-೧೦-೧೯೯೫	”
೧೩.	ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, ೧೯೯೫	೨೦-೧೦-೧೯೯೫	”

ಅಧ್ಯಕ್ಷರು : ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು) (ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿ) ನವರ ಪರವಾಗಿ :- ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ 213 (2) (ಎ) ಕಲಮಿನ ಮೇರೆಗೆ 1995 ನೇ ಇಸವಿಯ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಸಂಖ್ಯೆ : 8 ರ ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 20-10-95 ರಂದು ಹೊರಡಿಸಲಾದ ಎಲ್‌ಡಬ್ಯೂ ಎಲ್50 ಎಲ್‌ಬಿಎನ್ 95 ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :- ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ 213 (2) (ಎ) ಕಲಮಿನ ಮೇರೆಗೆ 1995 ನೇ ಇಸವಿ ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ (ತಿದ್ದುಪಡಿ) ಸಂಖ್ಯೆ : 10 ರ ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 29-11-95 ರಂದು ಹೊರಡಿಸಲಾದ ಎಲ್‌ಡಬ್ಲ್ಯೂ 55 ಎಲ್‌ಜಿಯ 95 ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :- ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ 213(2) (ಎ) ಕಲಮಿನ ಮೇರೆಗೆ, 1995 ನೇ ಇಸವಿಯ ಕರ್ನಾಟಕ ಪಂಚಾಯತ್‌ರಾಜ್ (ಎರಡನೇ ತಿದ್ದುಪಡಿ) ಸಂಖ್ಯೆ : 9 ರ ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 29-11-1995 ರಂದು ಹೊರಡಿಸಲಾದ ಎಲ್‌ಡಬ್ಲ್ಯೂ 39 ಎಲ್‌ಜಿಎಸ್ 95 ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಬಿ. ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :- ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ 213 (2) (ಎ) ಕಲಮಿನ ಮೇರೆಗೆ 1995 ನೇ ಇಸವಿಯ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ಸಂಖ್ಯೆ : 7 ರ ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 13-10-1995 ರಂದು ಹೊರಡಿಸಲಾದ ಎಲ್‌ಡಬ್ಲ್ಯೂ49 ಎಲ್‌ಜಿಎಸ್ 95 ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :- ಸಭೆಯ ಮುಂದೆ ಮಂಡಿಸಲಾಯಿತು.

ನಿಯಮ 159 ರ ಸೇರೆಗೆ ಪ್ರಸ್ತಾವದ ಮಂಡನೆ

ವಿಷಯ : "ಕಾವೇರಿ ಜಲ ವಿವಾದ ನ್ಯಾಯ ಮಂಡಳಿಯು ದಿನಾಂಕ 19-12-1995 ರಂದು ನೀಡಿರುವ ಮಧ್ಯಂತರ ಆದೇಶದಿಂದ ಉದ್ಭವಿಸಿರುವ ಪರಿಸ್ಥಿತಿ ಬಗ್ಗೆ ಪ್ರಸ್ತಾವನೆ"

+ ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ನಿರ್ಣಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

> "ಅಂತರ ರಾಜ್ಯದ ಜಲ ವಿವಾದದಂಥ ಸೂಕ್ಷ್ಮ, ಗಂಭೀರ ಹಾಗೂ ವ್ಯಾಪಕ ಪರಿಣಾಮಗಳನ್ನುಂಟು ಮಾಡುವ ವಿವಾದಗಳನ್ನು ಸಂಬಂಧಿಸಿದ ರಾಜ್ಯದ ಮುಖ್ಯ ಮಂತ್ರಿಗಳು ಕರೆತು, ಚರ್ಚಿಸಿ, ಸೌಹಾರ್ದಯುತವಾದ, ಸರ್ವಸಮ್ಮತವಾದ ನಿರ್ಣಯಕ್ಕೆ ಬರುವುದು ಕಾರ್ಯಸಾಧುವು ಹಾಗೂ ಅಪೇಕ್ಷಣೀಯವಾದದ್ದೆಂದು ಭಾವಿಸಿ ಈ ವಿವೇಕಯುತವಾದ ನೀತಿಯನ್ನು ಇಲ್ಲಿಯವರೆಗೆ ಅನುಸರಿಸಿಕೊಂಡು ಬಂದಿರುವುದು ಇತ್ತೀಚಿನ ಇತಿಹಾಸ.